ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡ ರವರು ನಿಯಮ-72ರ ಅಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರಿಸುವ ಕುರಿತು.

## ವಿಷಯ

ಅರೆಕಾಲಿಕ (ಜೆ.ಓ.ಸಿ) ನೌಕರರನ್ನು ವಿಲೀನಗೊಳಿಸುವ ವಿಧೇಯಕ 2011ರ ಪ್ರಕಾರ ಅನುದಾನಿತ ಕಾಲೇಜುಗಳ ವಿಲೀನ ಪರಿಶೀಲನಾ ಸಮಿತಿಯ ಉಪನ್ಯಾಸಕರ ಪಟ್ಟಿಯನ್ನು ತಯಾರಿಸಿ ಅನುಮೋದಿಸಲಾಗಿರುತ್ತದೆ. ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಒಂದು ವರ್ಷದೊಳಗೆ ಪ್ರಕ್ರಿಯೆಯನ್ನು ಪೂರ್ಣಗೊಳಿಸತಕ್ಕದ್ದು ಎಂದು ವಿಧೇಯಕದಲ್ಲಿ ಸೂಚಿಸಿರುತ್ತದೆ. ಆ ಪ್ರಕಾರವಾಗಿ 133 ಉಪನ್ಯಾಸಕರುಗಳಿಗೆ ಆದೇಶ ನೀಡಲಾಗಿರುತ್ತದೆ. ಉಳಿದ 12 ಜನ ಜೆ.ಓ.ಸಿ ಉಪನ್ಯಾಸಕರುಗಳಿಗೆ ಕೌನ್ಸಿಲಿಂಗ್ ಮಾಡಲು ವಿಳಂಬವಾಗಿರುವುದರಿಂದ ದಿನಾಂಕ:05.03.2015ರಂದು ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ಕೌನ್ಸಿಲಿಂಗ್ ಮಾಡಿ ಸ್ಥಳ ನಿಯುಕ್ತಿಗೊಳಿಸಿ ಆರ್ಥಿಕ ಇಲಾಖೆಯಿಂದ 12 ಜನ ಉಪನ್ಯಾಸಕರುಗಳ ಪಟ್ಟಿ ಅನುಮೋದನೆಗೊಂಡು ಸರ್ಕಾರಿ ಆದೇಶಕ್ಕೆ ಶಿಕ್ಷಣ ಇಲಾಖೆಗೆ ಬಂದಿರುತ್ತದೆ. ಆದರೆ ಇದುವರೆಗೂ ಕಡತಕ್ಕೆ ಅನುಮೋದನೆ ದೊರೆತಿರುವುದಿಲ್ಲ. ದಿನಾಂಕ:22.01.2021ರಂದು ಮಾನ್ಯ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ನಡೆದಿದ್ದು, ಸದರಿ ಸಭೆಯಲ್ಲಿ ಒಂದು ತಿಂಗಳೊಳಗೆ ಈ ಸಮಸ್ಯೆಯನ್ನು ಬಗೆಹರಿಸಲಾಗುವುದೆಂದು ತೀರ್ಮಾನ ಕೈಗೊಳ್ಳಲಾಗಿತ್ತು. ಆದರೆ ಇದುವರೆವಿಗೂ ಯಾವುದೇ ಕ್ರಮ ಜರುಗಿಸಿರುವುದಿಲ್ಲ.

133 ಜೆ.ಓ.ಸಿ ಉಪನ್ಯಾಸಕರಿಗೆ ಆದೇಶ ನೀಡಿರುವ ನಿಯಮದಂತೆ ಹಾಗೂ 133 ಅನುದಾನಿತ ಕಾಲೇಜು ಉಪನ್ಯಾಸಕರಿಗೆ ಅನ್ವಯವಾಗುವ ನಿಯಮಗಳಿಗೆ ಈ 12 ಜನ ಉಪನ್ಯಾಸಕರುಗಳು ಬದ್ಧರಾಗಿರುವುದರಿಂದ ಹಾಗೂ ಹಣಕಾಸು ಇಲಾಖೆಯಿಂದ ಅನುಮೋದನೆಗೊಂಡಿರುವುದರಿಂದ 12 ಜನ ಉಪನ್ಯಾಸಕರುಗಳಿಗೂ ಉಪನ್ಯಾಸಕರ ಹುದ್ದೆ ನೀಡಿ ಆದೇಶಿಸುವಂತೆ ಗಮನ ಸೆಳೆಯಲಾಗಿದೆ.

## ಉತ್ತರ

ಸರ್ಕಾರದ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ 22 ಶಾಸನ 2011, ದಿನಾಂಕ:6.4.2011ರ ವಿಧೇಯಕದನ್ವಯ 12 ಜನ ಅರೆಕಾಲಿಕ ಉಪನ್ಯಾಸಕರುಗಳನ್ನು ಅನುದಾನಿತ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಹುದ್ದೆಯಲ್ಲಿ ವಿಲೀನಗೊಳಿಸಲು ಅಧಿನಿಯಮದ ನಿಯಮ 3 (1) (ಬಿ) ಯಾವೊಬ್ಬ ಅರೆಕಾಲಿಕ ವೃತ್ತಿ ಆಧರಿತ ಕೋರ್ಸುಗಳ ನೌಕರನನ್ನು ಸಂಬಂಧಿಸಿದ ನೇಮಕಾತಿಯ ಸೂಕ್ತ ನಿಯಮಗಳಡಿಯಲ್ಲಿ ಆ ಹುದ್ದೆಗಾಗಿ ನಿಯಮಿಸಲಾದ ವಿದ್ಯಾರ್ಹತೆಯನ್ನು ತನ್ನ ವಿಲೀನದ ದಿನಾಂಕದಂದು ಆತನು ಹೊಂದಿರದ ಹೊರತು ವಿಲೀನಗೊಳಿಸತಕ್ಕದ್ದಲ್ಲ ವೆಂದು ತಿಳಿಸಲಾಗಿದೆ.

ಪದವಿ ಪೂರ್ವ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 35 ಡಿಜಿಓ 2009, ದಿನಾಂಕ:15/05/2014 ರಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನ್ಯಾಸಕರಿಗೆ ಸ್ನಾತಕೋತ್ತರ ಪದವಿಯಲ್ಲಿ ಶೇ.55ರಷ್ಟು ಹಾಗೂ ಬಿ.ಇಡಿ ಪದವಿಯನ್ನು ಹೊಂದಿರಬೇಕೆಂದು ನಿಯಮಾವಳಿಗಳನ್ನು ರೂಪಿಸಲಾಗಿದೆ. ವೃಂದ ಮತ್ತು ನೇಮಕಾತಿ, ವಿಲೀನ ವಿಧೇಯಕ ಮತ್ತು ಎನ್.ಸಿ.ಟಿ.ಇ ನಿಯಮಗಳಂತೆ, ಉಪನ್ಯಾಸಕರುಗಳು ಬಿ.ಇಡಿ ಪದವಿ ಪಡೆಯುವುದು ಕಡ್ಡಾಯವಾಗಿರುವುದರಿಂದ, ಈ ಉಪನ್ಯಾಸಕರುಗಳು ಬಿ.ಇಡಿ ಪದವಿಯನ್ನು ಪಡೆಯದೇ ಇರುವುದರಿಂದ ಸದರಿಯವರುಗಳನ್ನು ವಿಲೀನಗೊಳಿಸಲು ಅವಕಾಶವಿರುವುದಿಲ್ಲ.

**ಸಂಖ್ಯೆ: ಇಪಿ 18 ಟಿವಿಇ 2021**

**(ಎಸ್.ಸುರೇಶ್ ಕುಮಾರ್)**
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಹಾಗೂ ಸಕಾಲ ಸಚಿವರು